ಕರ್ನಾಟಕ ಸರ್ಕಾರ

ಸಂಖ್ಯೆ: ಕಾಇ 88 ಎಲ್‌ಡಬ್ಲ್ಯೂಎ 2016 (ಭಾಗ-1)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 29.05.2021.

## ಅಧಿಸೂಚನೆ

ಕರ್ನಾಟಕ ರಾಜ್ಯಾದ್ಯಂತ "ಲೋಡಿಂಗ್ ಮತ್ತು ಅನ್‌ಲೋಡಿಂಗ್ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು" ಉದ್ದಿಮೆಯಲ್ಲಿ ಯಾವುದೇ ಕೆಲಸದಲ್ಲಿ ತೊಡಗಿರುವ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ಪ್ರಥಮ ಬಾರಿಗೆ ನಿಗದಿಪಡಿಸುವ ಸಲುವಾಗಿ ರಾಜ್ಯ ಸರ್ಕಾರವು ಕನಿಷ್ಠ ವೇತನ ಕಾಯ್ದೆ 1948ರ (1948ರ ಕೇಂದ್ರಾಧಿನಿಯಮ, XI)ರ ಸೆಕ್ಷನ್ 27ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರಡು ಅಧಿಸೂಚನೆಯನ್ನು ಸಂಖ್ಯೆ: ಕಾಇ 88 ಎಲ್‌ಡಬ್ಲ್ಯೂಎ 2016 (Part-1) ದಿನಾಂಕ: 06.12.2017ನ್ನು ದಿನಾಂಕ: 04.01.2018ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ, ಅದರಿಂದ ಬಾಧಿತರಾಗುವ ವ್ಯಕ್ತಿಗಳಿಂದ ಸಲಹೆಗಳನ್ನು ಹಾಗೂ ಆಕ್ಷೇಪಣೆಗಳನ್ನು ಸಲ್ಲಿಸಲು ಎರಡು (02) ತಿಂಗಳ ಕಾಲಾವಕಾಶವನ್ನು ಸಂಬಂಧಿಸಿದವರೆಲ್ಲರಿಗೂ ಕಲ್ಪಿಸಿರುತ್ತದೆ. ಸದರಿ ಅವಧಿಯಲ್ಲಿ ಕರಡು ಅಧಿಸೂಚನೆಗೆ ಸಂಬಂಧಿಸಿದಂತೆ ಯಾವುದೇ ಸಲಹೆ/ ಆಕ್ಷೇಪಣೆಗಳು ಸರ್ಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ಸದರಿ ಕರಡು ಅಧಿಸೂಚನೆ ಬಗ್ಗೆ ಸಲಹೆಗಳನ್ನು ನೀಡುವ ಸಲುವಾಗಿ ದಿನಾಂಕ: 03.07.2020 ರಂದು ನಡೆದ ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯ ಸಭೆಯಲ್ಲಿ ಈ ಕ್ಷೇತ್ರದ ಬಗ್ಗೆ ತಿಳುವಳಿಕೆಯುಳ್ಳ ಮಂಡಳಿಯ ಸದಸ್ಯರುಗಳಲ್ಲಿ ಕೆಲವು ಸದಸ್ಯರನ್ನು ಆಯ್ಕೆ ಮಾಡಿ, ಸದರಿ ಸದಸ್ಯರು ಕೂಲಂಕಷವಾಗಿ ಹುದ್ದೆವಾರು ವೇತನ ದರಗಳನ್ನು ಕುರಿತು ಸಲ್ಲಿಸಿರುವ ವರದಿಯಲ್ಲಿ ನೀಡಿದ ಸಲಹೆಗಳನ್ವಯ ಅಂತಿಮ ಅಧಿಸೂಚನೆಯನ್ನು ಹೊರಡಿಸಲು ಸರ್ಕಾರಕ್ಕೆ ತನ್ನ ಶಿಫಾರಸ್ಸನ್ನು ನೀಡಿರುತ್ತದೆ.

ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯು ದಿನಾಂಕ: 03.07.2020ರ ಸಭೆಯಲ್ಲಿ ನೀಡಿರುವ ಸಲಹೆಗಳನ್ನು ಹಾಗೂ ಸಂಬಂಧಿಸಿದ ಇತರೆ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡಿರುವ ರಾಜ್ಯ ಸರ್ಕಾರವು, ಕನಿಷ್ಠ ವೇತನ ಕಾಯ್ದೆ, 1948ರ (ಕೇಂದ್ರಾಧಿನಿಯಮ XI) ಪರಿಚ್ಛೇದ 3 (1) (ಬಿ) ಮತ್ತು 5 (1) (ಬಿ) ರಡಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಕರ್ನಾಟಕ ರಾಜ್ಯದಾದ್ಯಂತ "ಲೋಡಿಂಗ್ ಮತ್ತು ಅನ್‌ಲೋಡಿಂಗ್ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು" ಉದ್ದಿಮೆಯಲ್ಲಿ ಯಾವುದೇ ಕೆಲಸದಲ್ಲಿ ತೊಡಗಿರುವ ಕಾರ್ಮಿಕರಿಗೆ ಈ ಅಧಿಸೂಚನೆಯು ಪ್ರಕಟವಾದ ದಿನಾಂಕದಿಂದ ಅನ್ವಯವಾಗುವಂತೆ ಈ ಕೆಳಕಂಡ ಕೋಷ್ಟಕದಲ್ಲಿ ನಿರ್ದಿಷ್ಟಪಡಿಸಿರುವಂತೆ, ಕನಿಷ್ಠ ವೇತನ ದರಗಳನ್ನು ಈ ಅಧಿಸೂಚನೆಯ ಮೂಲಕ

. . 2

ಪರಿಷ್ಕರಿಸಲಾಗಿರುತ್ತದೆ. ಈ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ಪಾವತಿಸಲು, ಕನಿಷ್ಠ ವೇತನ ಕಾಯ್ದೆ–1948ರ ಕಲಂ 12 ರನ್ವಯ ಸಂಬಂಧಿಸಿದ ಎಲ್ಲಾ ಉದ್ಯೋಗದಾತರು ಬಾಧ್ಯಸ್ಥರಾಗಿರುತ್ತಾರೆ.

"ಕನಿಷ್ಠ ವೇತನ ಕೋಷ್ಟಕ"

"ಲೋಡಿಂಗ್ ಮತ್ತು ಅನ್‌ಲೋಡಿಂಗ್ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು" ಅನುಸೂಚಿತ ಉದ್ದಿಮೆ

| ಕ್ರ ಸಂ | ಕೆಲಸದ ವರ್ಗೀಕರಣಗಳು | ಪ್ರಸ್ತಾಪಿಸಿರುವ ಕನಿಷ್ಠ ವೇತನ ದರಗಳು (ರೂ.) |
|---|---|---|
| I | ಗೋಣಿಚೀಲಗಳಿಗೆ ಸಂಬಂಧಿಸಿದ ಕೆಲಸಗಳು | |
| | 1. ತುಂಬಿಸಿರುವ ಗೋಣಿಚೀಲವನ್ನು ಹೊಲಿಯುವುದು (ಒಂದಕ್ಕೆ) | 03.50 |
| | 2. ಗೋಣಿಚೀಲಗಳ ಕಂತೆಯನ್ನು ಕಟ್ಟುವುದು (100 ಚೀಲಗಳ ಒಂದು ಕಂತೆಗೆ) | 10.00 |
| | 3. ಗೋಣಿಚೀಲವನ್ನು ತುಂಬಿಸಿ ಹೊಲಿಯಲು (ಒಂದಕ್ಕೆ) | 06.00 |
| II | ಕಬ್ಬಿಣ / ಆಹಾರ ಧಾನ್ಯಗಳು / ಮಸಾಲೆ ಪದಾರ್ಥಗಳು / ತರಕಾರಿ/ ಹಣ್ಣುಪದಾರ್ಥಗಳಿಗೆ ಸಂಬಂಧಿಸಿದ ಕೆಲಸಗಳು: | |
| | 1. ಚೀಲವೊಂದನ್ನು ವಾಹನಕ್ಕೆ ಲೋಡ್ ಮಾಡಲು (55 ಕಿ.ಗ್ರಾಂ. ತೂಕ) | 7–00 |
| | 2. ಚೀಲವೊಂದನ್ನು ವಾಹನಕ್ಕೆ ಲೋಡ್ ಮಾಡಲು (25 ಕಿ.ಗ್ರಾಂ. ತೂಕ) | 4–00 |
| | 3. 55 ಕಿ.ಗ್ರಾಂ. ಚೀಲವೊಂದನ್ನು ವಾಹನದಿಂದ ಅನ್‌ಲೋಡ್ ಮಾಡಲು | 6–00 |
| | 4. 25 ಕಿ.ಗ್ರಾಂ. ಚೀಲವೊಂದನ್ನು ವಾಹನದಿಂದ ಅನ್‌ಲೋಡ್ ಮಾಡಲು | 3–50 |
| | 5. ಪದಾರ್ಥವನ್ನು ಸುರುವಿ ಚೀಲ ತುಂಬುವುದು | 5–00 |
| | 6. ತುಂಬಿದ ಚೀಲವನ್ನು ಹೊಲಿಯುವುದು | 3–50 |
| | 7. ತುಂಬಿದ ಚೀಲವನ್ನು ತೂಕ ಮಾಡುವುದು | 3–50 |
| | 8. ತರಕಾರಿ/ ಹಣ್ಣುಗಳ ಟ್ರೇ ವಾಹನಕ್ಕೆ ಲೋಡ್ ಮಾಡಲು (15–30 ಕಿ.ಗ್ರಾಂ) | 4–50 |
| | 9. ತರಕಾರಿ/ ಹಣ್ಣುಗಳ ಟ್ರೇ ವಾಹನಕ್ಕೆ ಅನ್‌ಲೋಡ್ ಮಾಡಲು (15–30 ಕಿ.ಗ್ರಾಂ) | 4–00 |
| | 10. ತರಕಾರಿ ಹಣ್ಣು ಟ್ರೇ ಗ್ರೇಡಿಂಗ್ ಪ್ಯಾಕಿಂಗ್ ಮಾಡಿ ವಾಹನಕ್ಕೆ ಲೋಡ್ ಮಾಡಲು (15–30 ಕಿ.ಗ್ರಾಂ. ಟ್ರೇ) | 10–00 |

. . 3

| | | | | |
|---|---|---|---|---|
| | 11. ಕಬ್ಬಿಣ 1 ಟನ್ ಲೋಡಿಂಗ್ | | | 300–00 |
| | 12. ಕಬ್ಬಿಣ 1 ಟನ್ ಅನ್ ಲೋಡಿಂಗ್ | | | 250–00 |
| | 13. ಲೋಡ್ ಆಗಿರುವ ವಾಹನಕ್ಕೆ ತಾಡಪಲ್ ಹಾಕಿ ಹಗ್ಗ ಬಿಗಿಯಲು 1 ಟನ್ ಗೆ | | | 50–00 |
| III | ದ್ರವರೂಪದ ಪದಾರ್ಥಗಳಿಗೆ ಸಂಬಂಧಿಸಿದ ಕೆಲಸಗಳು | | | |
| | | 10 ಲೀ. (ರೂ.) | 30 ಲೀ–50 ಲೀ (ರೂ.) | 70 ಲೀ–200ಲೀ (ರೂ.) |
| | 1. ಲೋಡ್ ಅನ್‌ಲೋಡ್ ಮಾಡಲು | 10–00 | 21–00 | 43–00 |
| | 2. ಲೋಡ್ ಅನ್‌ಲೋಡ್ ಮಾಡಲು (100 ಯಾರ್ಡ್‌ಗಿಂತ ಹೆಚ್ಚು ದೂರ) | 14–00 | 29–00 | 65–00 |
| | 3. ಜೋಡಿಸುವುದು | 2–00 | 5–00 | 8–00 |
| | 4. ತೂಕ ಮಾಡಲು | 3–00 | 7–00 | 8–00 |
| | 5. ಲಾಟ್ ವರ್ಗಾಯಿಸಲು | 10–00 | 21–00 | 43–00 |
| | 6. ಗೋಡೌನ್ / ವಾಹನಗಳಿಂದ ವಿತರಣೆ ಮಾಡಲು | 10–00 | 22–00 | 178–00 |
| | 7. ಡ್ರಮ್ ಅಥವಾ ವಾಹನದಿಂದ ಇನ್ನೊಂದು ವಾಹನಕ್ಕೆ ವರ್ಗಾಯಿಸಲು | 10–00 | 21–00 | 43–00 |
| IV | ಅನಿಲ ರೂಪದ ಪದಾರ್ಥಗಳು/ ಸಿಲಿಂಡರ್/ ಬಾಕ್ಸ್‌ಗೆ ಸಂಬಂಧಿಸಿದ ಕೆಲಸಗಳು | | | |
| | 1. ಅನಿಲಭರಿತ ಸಿಲಿಂಡರ್/ ಸರಕು ತುಂಬಿದ ಬಾಕ್ಸ್‌ವೊಂದನ್ನು ಲೋಡ್ ಅಥವಾ ಅನ್‌ಲೋಡ್ ಮಾಡಲು (ಹತ್ತಿರದ ಗೋಡೌನ್ ಅಥವಾ ವಾಹನಕ್ಕೆ ) | | | 9–00 |
| | 2. ಸಿಲಿಂಡರ್ / ಬಾಕ್ಸ್‌ಗಳನ್ನು ಲೋಡ್ ಅಥವಾ ಅನ್‌ಲೋಡ್ ಮಾಡಲು (100 ಯಾರ್ಡ್‌ಗಿಂತ ಹೆಚ್ಚು ದೂರ) | | | 13–00 |
| | 3. ಸಿಲಿಂಡರ್ / ಬಾಕ್ಸ್‌ಗಳನ್ನು ಒಂದು ವಾಹನದಿಂದ ಇನ್ನೊಂದು ವಾಹನಕ್ಕೆ ವರ್ಗಾಯಿಸಲು | | | 10–00 |
| | 4. ಸಿಲಿಂಡರ್ / ಬಾಕ್ಸ್ ತೂಕ ಮಾಡಲು | | | 3–00 |
| | 5. ಸಿಲಿಂಡರ್/ ಬಾಕ್ಸ್‌ಗಳನ್ನು ಜೋಡಿಸಲು | | | 3–00 |
| | 6. ಲಾಟ್‌ಗಳನ್ನು ವರ್ಗಾಯಿಸಲು | | | 7–00 |
| | 7. ಅನಿಲ ತುಂಬಿದ ಸಿಲಿಂಡರ್/ ಸರಕು ತುಂಬಿದ ಬಾಕ್ಸ್‌ಗಳನ್ನು ತೂಕ ಮಾಡಿ ಲೋಡ್ ಮಾಡಲು | | | 10–00 |
| | 8. ಸಿಲಿಂಡರ್/ ಬಾಕ್ಸ್‌ಗಳನ್ನು ಇಳಿಸಿ, ತೂಕ ಮಾಡಿ, ಜೋಡಿಸಲು | | | 11–00 |
| | 9. ಗೋಡೌನ್ ಅಥವಾ ವಾಹನಗಳಿಂದ ವಿತರಣೆ ಮಾಡಲು | | | 7–00 |

ಮೇಲ್ಕಂಡ ಕನಿಷ್ಠ ವೇತನ ದರಗಳನ್ನು ಸರ್ಕಾರವು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನಿಗದಿಪಡಿಸಿದ್ದು, ಈ ಎಲ್ಲಾ ಷರತ್ತುಗಳನ್ನು ಯಥಾವತ್ತಾಗಿ ಉದ್ಯೋಗದಾತರು ಪಾಲಿಸಲು ಬಾಧ್ಯಸ್ಥರಿರುತ್ತಾರೆ;

_ಸಾಮಾನ್ಯ ಷರತ್ತುಗಳು:_

1. ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು ನಿಗದಿಪಡಿಸಿರುವ ಆರ್–127 ಗರಿಷ್ಟ ತೂಕದ ಶಿಫಾರಸ್ಸು 1967 **(R-127: Maximum Weight Convention 1967)** ಗಳನ್ವಯ ಒಬ್ಬ ವ್ಯಕ್ತಿಯು 55 ಕಿ.ಗ್ರಾಂ ತೂಕವನ್ನು ಒಯ್ಯಬಹುದಾಗಿರುತ್ತದೆ. ಈ ಮಿತಿಗೆ ಒಳಪಟ್ಟಂತೆ ಲೋಡಿಂಗ್ ಮತ್ತು ಅನ್‌ಲೋಡಿಂಗ್ ವೃತ್ತಿಗೆ ಸಂಬಂಧಿಸಿದಂತೆ ತೂಕದ ಮಿತಿಯನ್ನು ನಿರ್ಧರಿಸಲಾಗಿದೆ.

2. ವ್ಯತ್ಯಾಸವಾಗುವ ತುಟ್ಟಿಭತ್ಯೆ:–

   ತುಟ್ಟಿಭತ್ಯೆ ಲೆಕ್ಕಾಚಾರವನ್ನು ವರ್ಷಕ್ಕೊಮ್ಮೆ ಮಾಡಲಾಗುತ್ತದೆ. ಹಿಂದಿನ ಕ್ಯಾಲೆಂಡರ್ ವರ್ಷದ ಹನ್ನೆರಡು (12) ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಾಂಕಗಳ ಸರಾಸರಿ ಆಧಾರದ ಮೇಲೆ ಏಪ್ರಿಲ್ ಮೊದಲನೇ ದಿನಾಂಕದಂದು ಪ್ರತಿ ವರ್ಷ ಲೆಕ್ಕಾಚಾರ ಮಾಡತಕ್ಕದ್ದು. ಅಲ್ಲದೇ ಗ್ರಾಹಕ ಬೆಲೆ ಸೂಚ್ಯಂಕಗಳ ಸಂಖ್ಯೆಯ ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ಲೆಕ್ಕ ಹಾಕಲಾಗುತ್ತದೆ. ಆದ್ದರಿಂದ ಮೊದಲ ಲೆಕ್ಕಾಚಾರವು ಗ್ರಾಹಕ ಬೆಲೆ ಸೂಚ್ಯಾಂಕದ (ಜನವರಿ 2018 ರಿಂದ ಡಿಸೆಂಬರ್ 2018) ರ ಸರಾಸರಿ ಆಧಾರದ ಮೇಲೆ 2019 ಏಪ್ರಿಲ್ 1 ನೇ ತಾರೀಖಿನಿಂದ ಜಾರಿಗೆ ಬರುತ್ತದೆ. ಗ್ರಾಹಕ ಬೆಲೆ ಸೂಚ್ಯಾಂಕ 7268 ಅಂಶಗಳಿಗಿಂತ ಹೆಚ್ಚಾಗುವ ಪ್ರತಿ ಅಂಶಕ್ಕೆ ಎಲ್ಲಾ ವರ್ಗದ ಕಾರ್ಮಿಕರಿಗೆ ದಿನ ಒಂದಕ್ಕೆ ನಾಲ್ಕು (4) ಪೈಸೆಯಂತೆ ತುಟ್ಟಿ ಭತ್ಯೆಯನ್ನು ಪಾವತಿಸತಕ್ಕದ್ದು. ತುಂಡು ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರು ಎಂಟು (8) ಗಂಟೆಗಳ ಅವಧಿಯಲ್ಲಿ ಕೆಲಸ ಮಾಡಿದಲ್ಲಿ ಪ್ರತಿ ಗಂಟೆಯೊಂದಕ್ಕೆ ಪಾವತಿಸಬೇಕಾಗಿರುವ ವೇತನವನ್ನು ಅನುಪಾತೀಯವಾಗಿ **(Proportionate)** ಪಾವತಿಸತಕ್ಕದ್ದು.

3. ಮೇಲ್ಕಂಡ ಕೋಷ್ಟಕದಲ್ಲಿ ನಿಗದಿಪಡಿಸಲಾಗಿರುವ ಕನಿಷ್ಠ ವೇತನದ ಮೊತ್ತದೊಂದಿಗೆ ಉದ್ಯೋಗದಾತರು ತಮ್ಮ ಸಂಪನ್ಮೂಲದಿಂದ ಪ್ರತ್ಯೇಕವಾಗಿ ಕಾರ್ಮಿಕರಿಗೆ ನೀಡಬೇಕಿರುವ ಶಾಸನಬದ್ಧ ಸೌಲಭ್ಯಗಳಾದ ಇಎಸ್‌ಐ ಮತ್ತು ಪಿಎಫ್ ವಂತಿಕೆಯನ್ನು ಕಡ್ಡಾಯವಾಗಿ ಸಂದಾಯ ಮಾಡತಕ್ಕದ್ದು.

4. ಮಹಿಳೆಯರು, ಪುರುಷರು, ತೃತೀಯ ಲಿಂಗಿಗಳು ಮತ್ತು ವಿಕಲಚೇತನರು ಒಂದೇ ರೀತಿಯ ಹಾಗೂ ಸಮ ಪ್ರಮಾಣದ ಕೆಲಸವನ್ನು ನಿರ್ವಹಿಸಿದ ಸಂದರ್ಭಗಳಲ್ಲಿ ಎಲ್ಲರಿಗೂ ಸಮಾನ ದರದ ವೇತನಗಳನ್ನು ಉದ್ಯೋಗದಾತರು ಸಂದಾಯ ಮಾಡತಕ್ಕದ್ದು.

5. ಈ ಅಧಿಸೂಚನೆಯಲ್ಲಿ ಕೆಲಸದ ವರ್ಗವನ್ನು ನಮೂದಿಸದೇ ಇರುವ ವರ್ಗಗಳಿಗೆ ಸೇರಿದ ಕಾರ್ಮಿಕರಿಗೆ ಅದೇ ಸ್ವರೂಪದ (ಸಮಾನ) ಕೆಲಸ ನಿರ್ವಹಿಸುತ್ತಿರುವ ಇತರೆ ವರ್ಗದ ಕಾರ್ಮಿಕರಿಗೆ ಪಾವತಿ ಮಾಡುತ್ತಿರುವ ವೇತನವನ್ನು ಸಂದಾಯ ಮಾಡತಕ್ಕದ್ದು.

6. ವೇತನ ಲೆಕ್ಕಾಚಾರದಲ್ಲಿ ರೂಪಾಯಿಯ ಭಾಗಾಂಶವು ಬಂದ ಪಕ್ಷದಲ್ಲಿ ಅದನ್ನು ಸಮೀಪದ ಹೆಚ್ಚಿನ ರೂಪಾಯಿಗೆ ಪೂರ್ಣಗೊಳಿಸುವುದು. ಸಂಸ್ಥೆಯಲ್ಲಿ ನಿಗದಿಪಡಿಸಿರುವ ವಾರದ ರಜೆ ಅಥವಾ ಹಬ್ಬದ ರಜಾ ದಿನಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಟ ವೇತನ ಕಾಯ್ದೆ, 1948 ಮತ್ತು ಅದರಡಿಯ ಕರ್ನಾಟಕ ನಿಯಮಗಳಿಗೆ ಒಳಪಟ್ಟು ಸಾಮಾನ್ಯ ವೇತನದ ಎರಡು ಪಟ್ಟು ವೇತನವನ್ನು ಪಾವತಿ ಮಾಡತಕ್ಕದ್ದು.

. . 5

7. ಈ ಉದ್ದಿಮೆಯಲ್ಲಿ ಗುತ್ತಿಗೆ ಕಾರ್ಮಿಕ (ನಿಯಂತ್ರಣ & ನಿಷೇಧ) ಕಾಯ್ದೆ, 1970ರಡಿ ಗುತ್ತಿಗೆದಾರರ ಮೂಲಕ ನಿಯೋಜಿಸಲಾಗಿರುವ ಕಾರ್ಮಿಕರಿಗೂ ಕೂಡ ಈ ಕನಿಷ್ಠ ವೇತನ ದರಗಳು ಅನ್ವಯವಾಗುತ್ತವೆ.

8. ಅಧಿಸೂಚಿತ ಕನಿಷ್ಠ ವೇತನಕ್ಕೆ ಹೆಚ್ಚುವರಿಯಾಗಿ ರೂಢಿ ಮತ್ತು ಪದ್ಧತಿಯನ್ವಯ ಕಾರ್ಮಿಕರು ವಸ್ತು ರೂಪದಲ್ಲಿ ಯಾವುದೇ ಸಂಭಾವನೆ ಪಡೆಯುತ್ತಿದ್ದಲ್ಲಿ, ಸದರಿ ಹೆಚ್ಚುವರಿ ವಸ್ತು ರೂಪದ ಸಂಭಾವನೆಯನ್ನು ಮುಂದುವರೆದು ಪಡೆಯಲು ಕಾರ್ಮಿಕರು ಅರ್ಹರಿರುತ್ತಾರೆ.

9. ಕಾರ್ಮಿಕರಿಗೆ ಪಾವತಿ ಮಾಡುವ ಒಟ್ಟು ವೇತನವು, ಈ ಅಧಿಸೂಚನೆಯಲ್ಲಿ ನಿಗಧಿಪಡಿಸಿರುವ ವೇತನ ದರಗಳನ್ನು ಮತ್ತು ಕಾಲಕಾಲಕ್ಕೆ ಹೆಚ್ಚಾಗುವ ತುಟ್ಟಿಭತ್ಯೆಗೆ ಕಡಿಮೆಯಾಗದಂತೆ ಕಡ್ಡಾಯವಾಗಿ ಪಾವತಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

A. Umadevi 29/5/2021
(ಎ. ಉಮಾದೇವಿ)
ಪೀಠಾಧಿಕಾರಿ–2,
ಕಾರ್ಮಿಕ ಇಲಾಖೆ (ಕನಿಷ್ಠ ವೇತನ).

ಇವರಿಗೆ,

1. ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–29.
2. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ. (ಕಾರ್ಮಿಕ ಆಯುಕ್ತರ ಮೂಲಕ)
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು (ಕಾರ್ಮಿಕ ಆಯುಕ್ತರ ಮೂಲಕ).
4. ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ವಾರ್ತಾ ಭವನ, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು.
5. ಸದಸ್ಯ ಕಾರ್ಯದರ್ಶಿ, ಕರ್ನಾಟಕ ಕನಿಷ್ಠ ವೇತನ ಸಲಹಾ ಮಂಡಳಿ, ಕಾರ್ಮಿಕ ಆಯುಕ್ತರ ಕಚೇರಿ, ಕಾರ್ಮಿಕ ಭವನ, ಬೆಂಗಳೂರು.
6. ಎಲ್ಲಾ ಜಿಲ್ಲೆಗಳ ಕಾರ್ಮಿಕ ಅಧಿಕಾರಿಗಳಿಗೆ (ಕಾರ್ಮಿಕ ಆಯುಕ್ತರ ಮೂಲಕ).
7. ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿ.

ಪ್ರತಿಗಳು:–

1. ಮಾನ್ಯ ಕಾರ್ಮಿಕ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ.
3. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕಾರ್ಮಿಕ ಇಲಾಖೆ.
4. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕಾರ್ಮಿಕ ಇಲಾಖೆ.